ಓ.ಎಸ್. ನಂಃ 234/2017
ಪಿ.ಡಬ್ಲ್ಯೂ -01

ದಿನಾಂಕ. 08.02.2022 ಸಾಕ್ಷಿಯನ್ನು ಪುನಃ ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಕೆ.ಎಂ.ಎನ್.ವಕೀಲರಿಂದ**

ದಿನಾಂಕ.18.06.2017 ರಂದು ಪ್ರತಿವಾದಿ ಯಾವ ಕಾರಣಕ್ಕಾಗಿ ನಿಮ್ಮಿಂದ ಸಾಲ ಪಡೆದರು ಎಂದು ನಿಮಗೆ ತಿಳಿಸಿದರಾ ಎಂದರೆ ಸಾಕ್ಷಿ ಪ್ರತಿವಾದಿ ಸಿಮೆಂಟ್ ವ್ಯಾಪಾರ ಮಾಡುತ್ತಿದ್ದು, ಸಿಮೆಂಟ್ ವ್ಯಾಪಾರಕೋಸ್ಕರ ಹಣವನ್ನು ಪಡೆಯುವುದಾಗಿ ತಿಳಿಸಿರುತ್ತಾರೆ. ಸಾಕ್ಷಿ ಮುಂದುವರೆದು ನಾಳೆ ಸಿಮೆಂಟ್ ಬರುವುದರಿಂದ ಹಣ ಪಡೆಯುವುದಾಗಿ ತಿಳಿಸಿರುತ್ತಾರೆ. ಹಣವನ್ನು ಪ್ರತಿವಾದಿ ಮತ್ತು ಅವರ ಗಂಡ ಪಡೆದಿರುತ್ತಾರೆ. ಹಣವನ್ನು ಪ್ರತಿವಾದಿಗಳಿಗೆ ವಾದಿಯ ಮನೆಯಲ್ಲಿ ಕೊಟ್ಟಿರುವುದಾಗಿ ಹೇಳುತ್ತಾರೆ. ಪ್ರತಿವಾದಿಗಳಿಗೆ ನೀಡಿದೆ ಹೇಳುವ ಹಣವನ್ನು ಬ್ಯಾಂಕಿನಿಂದ ತಂದು ಮನೆಯಲ್ಲಿ ಇಟ್ಟುಕೊಂಡಿದ್ದೀರಾ ಎಂದರೆ ಸಾಕ್ಷಿ ನಮ್ಮ ಬಳಿ ಇದ್ದ ಚೀಟಿ ಹಣವನ್ನು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನೀವು ಚೀಟಿಯನ್ನು ಎಲ್ಲಿ ಹಾಕಿದ್ದೀರಾ ಎಂದರೆ ಸಾಕ್ಷಿ ವಿಭಾ ಚಿಟ್?ಫಂಡ್?ನಲ್ಲಿ ಎಂದು ಹೇಳುತ್ತಾರೆ. ವಿಭಾ ಚಿಟ್ ಫಂಡ್ ನಲ್ಲಿ ಯಾವಾಗ ಚೀಟಿಯನ್ನು ಹಾಕಿದ್ದೀರಿ ಎಂದರೆ ಸಾಕ್ಷಿ ಜ್ಞಾಪಕವಿಲ್ಲ ಎಂದು ಹೇಳುತ್ತಾರೆ. ಸದರಿ ಚೀಟಿಯನ್ನು ಯಾವಾಗ ಹರಾಜು ಕೂಗಿ ತೆಗೆದುಕೊಂಡಿರುತ್ತೀರಾ ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನೀವು ವಾದ ಪತ್ರದಲ್ಲಿ ಹೇಳಿದಂತೆ ದಿನಾಂಕ.18.06.2017 ರ ಎಷ್ಟು ದಿನಗಳ ಮುಂಚಿತವಾಗಿ ಚೀಟಿ ಹಣವನ್ನು ತೆಗೆದುಕೊಂಡಿರುತ್ತೀರಾ ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಜ್ಞಾಪಕ ಇಲ್ಲ ಎಂದು ಹೇಳುತ್ತಾರೆ. ವಿಭಾ ಚಿಟ್ ಫಂಡ್ ನವರು ಹರಾಜು ಕೂಗಿ ತೆಗೆದುಕೊಂಡ ಹಣವನ್ನು ನಗದಾಗಿ ಕೊಟ್ಟರೋ ಅಥವಾ ಚೆಕ್?ಮೂಲಕ ಕೊಟ್ಟರೋ ಎಂದರೆ ಸಾಕ್ಷಿ ಚೆಕ್?ಮೂಲಕ ಎಂದು ಹೇಳುತ್ತಾರೆ. ವಿಭಾಗ ಚಿಟ್? ಫಂಡ್ ನವರು ನಿಮಗೆ ಹಣವನ್ನು ಚೆಕ್? ಮೂಲಕ ನೀಡಿದ್ದರಿಂದ ನಿಮ್ಮ ಬ್ಯಾಂಕಿನ ಖಾತೆಯಲ್ಲಿ ಹಣ ಪಾವತಿ ಆದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ವಿಭಾಗ ಚಿಟ್?ಫಂಡ್?ನವರು ನೀಡಿದ ಹಣ ನಿಮ್ಮ ಖಾತೆಯಲ್ಲಿ ಪಾವತಿ ಆದ ಬಗ್ಗೆ ಬ್ಯಾಂಕಿನ ಎಕ್ಸ್ ಟ್ರಾಕ್ಟ್ ನ್ನು ಹಾಜರುಪಡಿಸಲು ನಿಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ದಿನಾಂಕ.18.06.2017 ರಂದು ನೀವು ಹೇಳಿದಂತೆ ಪ್ರತಿವಾದಿಯರಿಗೆ 4 ಲಕ್ಷ ರೂಗಳನ್ನು ವಿಭಾಗ ಚಿಟ್?ಫಂಡ್?ನಿಂದ ಪಡೆದಂತಹ ಹಣದಲ್ಲಿ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ಹೇಳಿದಂತೆ ದಿನಾಂಕ.18.06.2017 ರಂದು ನಿಮ್ಮ ಬಳಿ 4 ಲಕ್ಷ ಹಣವೇ ಇರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಬಳಿ 4 ಲಕ್ಷ ಹಣ ಇಲ್ಲದೇ ಇದ್ದುದರಿಂದ ಪ್ರತಿವಾದಿಯೇ ಆಗಲೀ, ಪ್ರತಿವಾದಿಯ ಗಂಡ ಆಗಲೀ ನಿಮ್ಮ ಬಳಿ ಬಂದು ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

ದಿನಾಂಕ.18.06.2017 ರಂದು ಪ್ರತಿವಾದಿಗಳಿಗೆ ನಿಮ್ಮಿಂದ ಹಣವನ್ನು ಎರವಲು ಪಡೆಯಲು ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ನಾನು ಅವರಿಗೆ ಹಣವನ್ನು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ದಿನಾಂಕ.18.06.2017 ರಂದು ಪ್ರತಿವಾದಿಗಳು ನಿಮ್ಮಿಂದ ಹಣವನ್ನು ಪಡೆಯದೇ ಇರುವುದರಿಂದ ನಿ.ಪಿ.1 ರಂತೆ ದಿನಾಂಕ.19.06.2017 ರಂದು ಹಣ ಪಾವತಿಗಾಗಿ ನಿಮಗೆ ಚೆಕ್ ನ್ನು ನೀಡಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಪ್ರತಿವಾದಿ ನಿ.ಪಿ.1 ರಂತೆ ಚೆಕ್ ನ್ನು ಹಣ ಪಾವತಿಗಾಗಿ ಖಾತೆಗೆ ಜಮಾ ಮಾಡುವಂತೆ ಹಣ ಪಡೆಯದೇ ಇರುವುದರಿಂದ ಹೇಳಿರಲಿಲ್ಲ ಎಂದರೆ ಸಾಕ್ಷಿ ಹೇಳಿದ್ದಕ್ಕೆ ಖಾತೆಗೆ ಜಮಾ ಮಾಡಿರುತ್ತೇನೆ ಎಂದು ಹೇಳುತ್ತಾರೆ.

ನೀವು ಹೇಳಿದಂತೆ ದಿನಾಂಕ.18.06.2017 ರಂದು ನಿ.ಪಿ.1 ರಂತೆ ಚೆಕ್‌ನ್ನು ಭರ್ತಿ ಮಾಡಿ ಕೊಡಲಾಗಿತ್ತೋ, ಆಗೆ ಕೊಡಲಾಗಿತ್ತೋ ಎಂದರೆ ಸಾಕ್ಷಿ 4 ಲಕ್ಷ ಹಣವನ್ನು ನಮೂದಿಸಿ ಸಹಿ ಮಾಡಿಕೊಟ್ಟಿದ್ದರು ಎಂದು ಹೇಳುತ್ತಾರೆ. ನಿ.ಪಿ.1 ರಲ್ಲಿ ನೀವು ಹೇಳಿದಂತೆ 4 ಲಕ್ಷ ಎಂಬುದನ್ನು ಅಕ್ಷರದಲ್ಲಿ ಬರೆಯಲಾಗಿತ್ತೋ ಅಥವಾ ಸಂಖ್ಯೆಯಲ್ಲಿ ನಮೂದಿಸಲಾಗಿತ್ತೋ ಎಂದರೆ ಸಾಕ್ಷಿ ಎರಡನ್ನು ನಮೂದಿಸಲಾಗಿತ್ತು ಎಂದು ಹೇಳುತ್ತಾರೆ.

ನಿ.ಪಿ.1 ರಲ್ಲಿ ಎಸ್. ವೇಣುಗೋಪಾಲ್ ಎಂದು ಯಾರು ನಮೂದಿಸಿದರು ಎಂದರೆ ಸಾಕ್ಷಿ ಪ್ರತಿವಾದಿ ಖಾಲಿ ಚೆಕ್ ಕೊಟ್ಟು ನೀವೇ ಬರೆದುಕೊಳ್ಳಿ ಎಂದು ಹೇಳಿ ಸಹಿ ಮಾಡಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಿಮ್ಮ ವಾದ ಪತ್ರದಲ್ಲಾಗಲೀ, ಮುಖ್ಯ ವಿಚಾರಣೆಯಲ್ಲಾಗಲೀ ಅಥವಾ ಪ್ರತಿವಾದಿಗೆ ನೀಡಿದ ತಿಳುವಳಿಕೆ ಪತ್ರದಲ್ಲಾಗಲೀ ಪ್ರತಿವಾದಿ ಖಾಲಿ ಚೆಕ್ ನೀಡಿ ಅದನ್ನು ನೀವೇ ಭರ್ತಿ ಮಾಡಿಕೊಳ್ಳಿ ಎಂದು ತಿಳಿಸಿದ್ದರು ಎಂದು ನಮೂದಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ನೀವು ಕೇಳಿದ್ದಕ್ಕೆ ಹೇಳಿದೆ ಎಂದು ಹೇಳುತ್ತಾರೆ.

ನಿ.ಪಿ.1 ರಂತೆ ಚೆಕ್ ನ್ನು ಪ್ರತಿಯನ್ನೇ ಭರ್ತಿ ಮಾಡಿಕೊಡುವಂತೆ ನಿವೇನಾದರೂ ಕೇಳಿದ್ದೀರಾ ಎಂದರೆ ಸಾಕ್ಷಿ ಜ್ಞಾಪಕ ಇಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ ದಿನಾಂಕ.18.06.2017 ರಂದು ನಿ.ಪಿ.1 ರಂತೆ ಖಾಲಿ ಚೆಕ್ ನ್ನು ಕೊಟ್ಟು ನೀವೇ ಭರ್ತಿ ಮಾಡಿಕೊಳ್ಳಿ ಎಂದು ಹೇಳಿಲ್ಲ ಎಂದರೆ ಸಾಕ್ಷಿ ಅವರು ಹೇಳಿದ್ದಕ್ಕೆ ಮಾಡಿದೇ ಎಂದು ಹೇಳುತ್ತಾರೆ.

ಪ್ರತಿವಾದಿ ಹಾಗೂ ಅವರ ಗಂಡ ನಿಮ್ಮ ಮನೆಗೆ ಬಂದು ದಿನಾಂಕ.18.06.2017 ರಂದು 4 ಲಕ್ಷ ರೂ ಪಡೆದರು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿ ಮತ್ತು ಅವರ ಗಂಡ ದಿನಾಂಕ.01.10.2014 ರಂದು ನಿಮ್ಮಿಂದ 4 ಲಕ್ಷ ರೂಗಳನ್ನು ಶೇಡಕಾ. ತಿಂಗಳಿಗೆ 2 ರೂ ಬಡ್ಡಿಗೆ ನಿಮ್ಮಿಂದ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ.01.10.2014 ರಂದು ನಿಮ್ಮಿಂದ 4 ಲಕ್ಷ ರೂಗಳನ್ನು ಸಾಲ ಪಡೆಯುವಾಗ ಪ್ರತಿವಾದಿ ಹಾಗೂ ಆತನ ಗಂಡ ಇಬ್ಬರು ತಮ್ಮ ಬಳಿ ಬಂದು ಪ್ರತಿವಾದಿಯ ಗಂಡ ಎಸ್.ಬಿ.ಐ. ಚೆಕ್ ನ್ನು ನೀಡಿದ್ದರು ಎಂದು ಹೇಳಿದಾಗ ಸಾಕ್ಷಿ ಹೌದು ಕೊಟ್ಟಿದ್ದರು ಎಂದು ಹೇಳಿದ್ದು ನಂತರ ಪ್ರತಿವಾದಿ ತಮಗೆ ಕರ್ನಾಟಕ ಬ್ಯಾಂಕ್ ಚೆಕ್ ನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಮತ್ತೊಮ್ಮೆ ಸದರಿ ಪ್ರಶ್ನೆಯನ್ನು ಕೇಳಿ ಕೊಟ್ಟಿರಲಿಲ್ಲ ಎಂದು ಹೇಳುತ್ತಾರೆ.

ಪ್ರತಿವಾದಿ ದಿನಾಂಕ.01.10.2014 ರಂದು ನಿಮ್ಮಿಂದ 4 ಲಕ್ಷ ಹಣವನ್ನು ಸಾಲ ಪಡೆದಾಗ ಪ್ರತಿವಾದಿಯ ಗಂಡ ಎಸ್.ಬಿ.ಐ. ಬ್ಯಾಂಕ್ ಚಳ್ಳಕೆರೆ ಶಾಖೆಯ ಚೆಕ್ ಸಂಖ್ಯೆ.231994 ಕೊಟ್ಟಿದ್ದು, ಪ್ರತಿವಾದಿ ನಿ.ಪಿ.1 ರಂತೆ ಚೆಕ್ ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ.01.10.2014 ರಲ್ಲಿ ಪ್ರತಿವಾದಿ ನೀಡಿದಂತಹ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಈ ದಾವೆಯನ್ನು ಹೂಡಿರುತ್ತೀರಾ ಎಂದರೆ ಸರಿಯಲ್ಲ. ದಿನಾಂಕ.01.10.2014 ರ ಸಾಲಕ್ಕೆ ಸಂಬಂಧಿಸಿದಂತೆ ಪ್ರತಿವಾದಿ ಮತ್ತು ಅವರ ಗಂಡ ದಿನಾಂಕ.30.03.2017 ರಂದು 5 ಲಕ್ಷದ 40 ಸಾವಿರದ ರೂಗಳನ್ನು ವಾಪಾಸ್ ನಿಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ.01.10.2014 ರಿಂದ 30.03.2017 ರವರೆಗೆ ಪ್ರತಿವಾದಿ ಮತ್ತು ಅವರ ಗಂಡ ನಿಮ್ಮಿಂದ ಪಡೆದ ಸಾಲಕ್ಕೆ ಶೇಕಡ 2% ತಿಂಗಳ ಬಡ್ಡಿಯಂತೆ 2 ಲಕ್ಷ 40 ಸಾವಿರ ರೂಗಳು ಆಗಿದ್ದು, ಅಸಲು ಮತ್ತು ಬಡ್ಡಿ ಸೇರಿಸಿ 6 ಲಕ್ಷದ 40 ಸಾವಿರಗಳಲ್ಲಿ ಪ್ರತಿವಾದಿ ಮತ್ತು ಆಕೆಯ ಗಂಡ 5 ಲಕ್ಷ 40 ಸಾವಿರ ರೂಗಳನ್ನು ಮರುಪಾವತಿಸಿರುತ್ತಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು 5 ಲಕ್ಷದ 40 ಸಾವಿರ ರೂಗಳನ್ನು ಮರುಪಾವತಿಸಿದ ಬಗ್ಗೆ ಒಂದು ರಸೀದಿಯನ್ನು ಸಾಕ್ಷಿಗೆ ತೋರಿಸಿದ್ದು, ಸದರಿ ರಸೀದಿಯಲ್ಲಿರುವ ಸ್ಟಾಂಪ್ ಮೇಲಿನ ಸಹಿ ಹಾಗೂ ಕೆಳಗಿನ ಸಹಿ ನಿಮ್ಮದ ಎಂದು ಕೇಳಿದ್ದಕ್ಕೆ ವಾದಿ ನನ್ನ ಸಹಿ ಅಲ್ಲ ಎಂದು ನಿರಾಕರಿಸಿರುತ್ತಾರೆ. ದಿನಾಂಕ.30.03.2017 ರಂದು ಪ್ರತಿವಾದಿ ಮತ್ತು ಅವರ ಗಂಡನಿಂದ 5 ಲಕ್ಷದ 40 ಸಾವಿರ ರೂಗಳನ್ನು ಪಡೆದು ರಸೀದಿ ಮೇಲೆ ನೀವೇ ಸಹಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ದಿನಾಂಕ.30.03.2017 ರಂದು 5 ಲಕ್ಷದ 40 ಸಾವಿರಗಳನ್ನು ಪ್ರತಿವಾದಿ ಮತ್ತು ಅವರ ಗಂಡನಿಂದ ಪಡೆದ ನಂತರ ಸಾಕ್ಷಿಗಳ ಸಮಕ್ಷಮ ಹಣ ಪಾವತಿ ರಸೀದಿಯನ್ನು ಬರೆಸಿಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ.

ದಿನಾಂಕ.30.03.2017 ರಂದು ಹಣ ಪಾವತಿ ಮಾಡಿದ ಬಗ್ಗೆ ಹಣ ಪಾವತಿ ರಸೀದಿಯನ್ನು ಆರ್.ಎಸ್.ವಿಭುಸ್ವಾಮಿ ಬರೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿನಾಂಕ.30.03.2017 ರಂದು ನೀವು ಬರೆದುಕೊಟ್ಟ ಹಣ ಪಾವತಿ ರಸೀದಿಗೆ ಸಾಕ್ಷಿಯಾದ ಬಸವರಾಜ್ ರವರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ಹೇಳುತ್ತಾರೆ.

ಓ.ಎಸ್. ನಂಃ 234/2017
ಪಿ.ಡಬ್ಲ್ಯೂ -01

ದಿನಾಂಕ.30.03.2017 ರಂದು ಪ್ರತಿವಾದಿ ಮತ್ತು ಅವರ ಗಂಡನಿಂದ 5 ಲಕ್ಷ 40 ಸಾವಿರ ರೂಗಳನ್ನು ಪ್ರತಿವಾದಿಯರ ಮನೆಯಲ್ಲೇ ಪಡೆದು, ಹಣ ಪಾವತಿ ರಸೀದಿಯನ್ನು ಬರೆದುಕೊಟ್ಟಿದ್ದರು ದಾವೆಗೋಸ್ಕರ ಬರೆದುಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತೇ ಇಲ್ಲ ಎಂದು ಹೇಳುತ್ತಾರೆ.

ದಿನಾಂಕ.01.04.2017 ರಲ್ಲಿ ಪ್ರತಿವಾದಿ ಮತ್ತು ಅವರ ಗಂಡ ನಿಮ್ಮಿಂದ ಪಡೆದಂತಹ ಸಾಲಕ್ಕೆ ದಿನಾಂಕ.30.03.2017 ರಲ್ಲಿ 1 ಲಕ್ಷ ಮಾತ್ರ ಬಡ್ಡಿಯ ಬಾಕಿ ಹಣ ಇತ್ತು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ದಿನಾಂಕ.30.03.2017 ರಲ್ಲಿ ಬರೆದುಕೊಟ್ಟ ಹಣ ಪಾವತಿ ರಸೀದಿಯಲೇ ನಿ.ಪಿ.1 ಮತ್ತು ಪ್ರತಿವಾದಿಯ ಗಂಡ ನೀಡಿದ ಚೆಕ್ ಸಂಖ್ಯೆಗಳನ್ನು ನಮೂದಿಸಿ ಬಾಕಿ 1 ಲಕ್ಷ ರೂವನ್ನು ಪಾವತಿಸಿದ ನಂತರ ಚೆಕ್ ಗಳನ್ನು ವಾಪಾಸ್ ಪಡೆಯುವಂತೆ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ.

ಪ್ರತಿವಾದಿ ಮತ್ತು ಅವರ ಗಂಡ ದಿನಾಂಕ.01.10.2014 ಕ್ಕೆ ಸಂಬಂಧಿಸಿದ ಸಾಲಕ್ಕೆ ನೀಡಿದ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡು ಪ್ರತಿವಾದಿಯ ವಿರುದ್ದ ಈ ದಾವೆಯನ್ನು ಹೂಡಿದ್ದು, ಪ್ರತಿವಾದಿಯ ಗಂಡನ ವಿರುದ್ಧ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿರುತ್ತೀರಾ ಎಂದರೆ ಸಾಕ್ಷಿ ಚೆಕ್ ಬೌನ್ಸ್ ಕೇಸ್ ಹಾಕಿದ್ದೇನೆ ಇದೆಲ್ಲ ಸುಳ್ಳು ದುಡ್ಡು ಕೊಟ್ಟಿರುವುದರಿಂದ ಹಾಕಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿ ನಿಮ್ಮಿಂದ ದಿನಾಂಕ.18.06.2017 ರಂದು ನಿಮ್ಮಿಂದ ಯಾವುದೇ ಸಾಲವನ್ನು ಪಡೆಯದೇ ಇದುದ್ದರಿಂದ ದಾವೆ ಹೂಡಲು ಯಾವುದೇ ಕಾರಣ ಇರುವುದಿಲ್ಲ ಎಂದರೆ ಸಾಕ್ಷಿ ಹಣ ಕೊಟ್ಟಿರುವುದರಿಂದ ಹೂಡಿದ್ದೇನೆ ಎಂದು ಹೇಳುತ್ತಾರೆ.

ಪ್ರತಿವಾದಿಯರು 1 ಲಕ್ಷ ರೂಗಳನ್ನು ಬಾಕಿ ಹಣ ಪಾವತಿಸಲು ನಿಮ್ಮ ಬಳಿ ಬಿಟ್ಟಂತ ಚೆಕ್ ಗಳನ್ನು ಮೋಸ ದಿಂದ ಪ್ರತಿವಾದಿ ವಿರುದ್ದ ಸುಳ್ಳು ದಾವೆಯನ್ನು ಹಾಕಿರುತ್ತೀರಾ ಎಂದರೆ ಸರಿಯಲ್ಲ. ದಿನಾಂಕ.18.06.2017 ರಂದು ಪ್ರತಿವಾದಿ ನಿಮ್ಮಿಂದ ಯಾವುದೇ ಸಾಲ ಪಡೆಯದೇ ಇರುವುದರಿಂದ ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಿಮ್ಮ ಬಳಿ ದಿನಾಂಕ.18.06.2017 ರಂದು ಸಾಲ ಪಡೆಯದೇ ಇರುವುದರಿಂದ ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವ ಅಂಶಗಳೆಲ್ಲ ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಚಳ್ಳಕೆರೆ.